03/02/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಸದಾ ಈ ನಶೆಯಲ್ಲಿರಿ - ತಂದೆಯು ನಮ್ಮನ್ನು ಮರಳಿ ಕರೆದೊಯ್ಯಲು ಬಂದಿದ್ದಾರೆ, ಈಗ ಎಲ್ಲರೂ ಹಿಂತಿರುಗಬೇಕು"

ಪ್ರಶ್ನೆ: ಈ ಸಮಯದಲ್ಲಿ ನೀವು ಮಕ್ಕಳು ಅತ್ಯಂತ ಶ್ರೇಷ್ಠವಾದ ಯಾವ ಪುಣ್ಯ ಮಾಡುತ್ತೀರಿ?

ಉತ್ತರ: ತಮ್ಮದೆಲ್ಲವನ್ನು ಶಿವ ತಂದೆಗೆ ಸಮರ್ಪಣೆ ಮಾಡಿ ಬಿಡುವುದು – ಇದು ಅತ್ಯಂತ ಶ್ರೇಷ್ಠವಾದ ಪುಣ್ಯವಾಗಿದೆ. ಸಮರ್ಪಣೆ ಮಾಡಿ ಸಂಪೂರ್ಣ ಶ್ರೀಮತದಂತೆ ಪೂರ್ತಿಯಾಗಿ ನಡೆಯುವುದರಿಂದ ತುಂಬಾ ಶ್ರೇಷ್ಠ ಪದವಿ ಪ್ರಾಪ್ತಿಯಾಗುತ್ತದೆ.

ಪ್ರಶ್ನೆ: ಮನುಷ್ಯರ ಬುದ್ಧಿಯಲ್ಲಿ ಯಾವ ಒಂದು ಹೊಸ ಮಾತು ತುಂಬಾ ಕಷ್ಟದಿಂದ ಕುಳಿತುಕೊಳ್ಳುತ್ತದೆ?

ಉತ್ತರ: ಶಿವ ತಂದೆಯು ನಿರಾಕಾರನಾಗಿದ್ದಾರೆ ಅವರು ಈ ಬ್ರಹ್ಮಾರವರ ಶರೀರದಲ್ಲಿ ಪ್ರವೇಶ ಮಾಡುತ್ತಾರೆ, ಅವರು ಎಲ್ಲರಿಗಿಂತ ಶ್ರೇಷ್ಠ ವ್ಯಕ್ತಿ ಆಗಿದ್ದಾರೆ. ಅವರ ಪಾತ್ರವೇ ಸರ್ವ ಶ್ರೇಷ್ಠ ಪಾತ್ರವಾಗಿದೆ, ಈ ಹೊಸ ಮಾತುಗಳು ಮನುಷ್ಯರ ಬುದ್ಧಿಯಲ್ಲಿ ತುಂಬಾ ಕಷ್ಟದಿಂದ ಕುಳಿತುಕೊಳ್ಳುತ್ತದೆ.

ಗೀತೆ: ಇಂದು ಬೆಳಿಗ್ಗೆ-ಬೆಳಿಗ್ಗೆ ಬಂದವರು ಯಾರು...........

ಓಂ ಶಾಂತಿ. ಶಿವ ತಂದೆ ಕುಳಿತು ತನ್ನ ಮಕ್ಕಳಿಗೆ ತಿಳಿಸಿ ಕೊಡುತ್ತಾರೆ - ಮಕ್ಕಳೇ ಶಿವ ತಂದೆ ನಿರಾಕಾರನಾಗಿದ್ದಾರೆ ಹಾಗೂ ನೀವು ಮಕ್ಕಳೂ ಸಹ ನಿರಾಕಾರ ಆಗಿದ್ದೀರೆಂದು ತಿಳಿದುಕೊಂಡಿದ್ದೀರಿ. ಅಂತಹ ಮಕ್ಕಳಿಗೆ ಕುಳಿತು ತಿಳಿಸಿ ಕೊಡುತ್ತಾರೆ. ಈ ರೀತಿ ತಿಳಿಸಿ ಕೊಡುವ ಉಪಾಯ ಕೇವಲ ಒಬ್ಬ ತಂದೆಯ ಬಳಿಯೇ ಇದೆ. ತಂದೆ ತಿಳಿಸುತ್ತಿದ್ದಾರೆ, ಭಗವಂತ ಯಾರ ಜೊತೆ ಮಾತನಾಡುತ್ತಾರೆ? ತನ್ನ ಮಕ್ಕಳೊಂದಿಗೆ, ಆತ್ಮಗಳ ಜೊತೆ ಮಾತನಾಡುತ್ತಾರೆ ಇದನ್ನು ತಂದೆ ಹಾಗೂ ಮಕ್ಕಳು ತಿಳಿದುಕೊಂಡಿದ್ದೀರಿ. ಆತ್ಮವು ಶರೀರವಿಲ್ಲದೆ ಏನನ್ನೂ ಕೇಳಲು ಆಗುವುದಿಲ್ಲ. ಶರೀರದ ಮೂಲಕವೇ ಕೇಳುತ್ತದೆ. ಪರಮಪಿತ ಪರಮಾತ್ಮ ಕುಳಿತು ತಿಳಿಸಿಕೊಡುವ ಸತ್ಸಂಗ ಇದೊಂದೇ ಆಗಿದೆ, ಉಳಿದವೆಲ್ಲವೂ ಆತ್ಮಗಳು ತಿಳಿಸಿಕೊಡುವ ಸತ್ಸಂಗಗಳಾಗಿವೆ. ಈಗ ಡ್ರಾಮಾದ ಚಕ್ರ ಮುಗಿಯುತ್ತಿರುವ ಕಾರಣ ಅವರೆಲ್ಲರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕು. ಇದೆಲ್ಲವೂ ಭಾರತವಾಸಿಯರ ಮಾತಾಗಿದೆ. ತಂದೆಯು ಭಾರತದಲ್ಲಿಯೇ ಬಂದು ಭಾರತವಾಸಿಯರಿಗೆ ಈ ರೀತಿ ಹೇಳುತ್ತಿದ್ದಾರೆ - ಮಕ್ಕಳೇ ನೀವು ಎಲ್ಲರಿಗಿಂತ ಹೆಚ್ಚು ಪಾತ್ರವನ್ನು ಅಭಿನಯಿಸಿದ್ದೀರಿ. ನೀವೇ ಸತ್ಯಯುಗದಲ್ಲಿ ದೇವೀ-ದೇವತೆಗಳಾಗಿದ್ದಂತಹವರು ಈಗ ಶೂದ್ರರಾಗಿದ್ದೀರಿ. ಪುನಃ ನಿಮಗೆ ಓದಿಸಿ ದೇವೀ-ದೇವತೆ ಮಾಡುತ್ತೇನೆ ಅನ್ಯರಿಗೂ ಹೇಗೆ ಓದಿಸಬೇಕೆಂದು ತಿಳಿಸಿಕೊಡುತ್ತೇನೆ. ಗೀತೆಯು ಸಹ ಭಾರತದ್ದೇ ಆಗಿದೆ. ಪ್ರತಿಯೊಬ್ಬರಿಗೂ ತಮ್ಮ-ತಮ್ಮ ಪುಸ್ತಕವಿದೆ. ಅನ್ಯ ಧರ್ಮಪಿತರೆಲ್ಲರು ಮನುಷ್ಯರಾಗಿದ್ದಾರೆ. ಅವರಿಗೆ ತಮ್ಮ-ತಮ್ಮದೇ ಆದ ಶರೀರವಿದೆ. ಇವರು ಸರ್ವ ಆತ್ಮಗಳ ನಿರಾಕಾರ ತಂದೆ ನಾಲೆಜ್ಫುಲ್ ಆಗಿದ್ದಾರೆ. ಅವರು ನಾಟಕದ ಆದಿ-ಮಧ್ಯ-ಅಂತ್ಯವನ್ನು ತಿಳಿದಿರುತ್ತಾರೆ. ತಂದೆಯು ನೀವು ಮಕ್ಕಳಿಗೆ ಓದಿಸಬೇಕಾಗುತ್ತದೆ, ಏಕೆಂದರೆ ನೀವೇ ಪುನಃ ಚಕ್ರವರ್ತಿ ರಾಜರಾಗಬೇಕಾಗಿದೆ. ಎಲ್ಲರೂ ಮನುಷ್ಯರಿಂದ ದೇವತೆಗಳು ಆಗುವುದಿಲ್ಲ. ಮೊದಲು ಯಾರು ದೇವೀ-ದೇವತೆಗಳಾಗಿದ್ದರು ಅವರೇ ಬಂದು ಪುನಃ ಸೇರಿಕೊಳ್ಳುತ್ತಾರೆ, ಯಾವಾಗ ದೇವೀ-ದೇವತಾ ಧರ್ಮ ಪೂರ್ಣವಾಗಿ ಸ್ಥಾಪನೆಯಾಗಿ ಬಿಡುತ್ತದೆ ಆಗ ಎಲ್ಲಾ ಮಠ ಪಂಥಗಳು ವಿನಾಶ ಹೊಂದುತ್ತವೆ. ಎಲ್ಲಾ ಆತ್ಮಗಳನ್ನು ತಂದೆ ಹಿಂತಿರುಗಿ ಕರೆದೊಯ್ಯುತ್ತಾರೆ. ತಂದೆ ಎಲ್ಲರನ್ನು ಹಿಂತಿರುಗಿ ಕರೆದುಕೊಂಡು ಹೋಗಲು ಪತಿತ ಪ್ರಪಂಚದಲ್ಲಿಯೇ ಬರುತ್ತಾರೆ. ಕಲ್ಪದ ಹಿಂದೆ ಯಾವ ಸಹಜ ರಾಜಯೋಗವನ್ನು ನಾವು ಕಲಿತುಕೊಂಡಿದ್ದೆವು ಅದನ್ನು ಈಗ ಕಲಿಯುತ್ತಿದೇವೆಂದು ನಾವು ಮಕ್ಕಳು ತಿಳಿದುಕೊಂಡಿದ್ದೇವೆ.

ವಿನಾಶ ಸಮೀಪಿಸಿದಂತೆ ಎಲ್ಲರ ಕಣ್ಣು ತೆರೆಯುವುದು. ಈಗ ಪರಮಪಿತ ಪರಮಾತ್ಮ ಇವರ ಶರೀರದಲ್ಲಿ ಪ್ರವೇಶ ಆಗುತ್ತಾರೆ ಎಂದು ಈಗ ಕೇವಲ ನಿಮಗಷ್ಟೆ ನಿಶ್ಚಯವಿದೆ. ಮಾರ್ಗದರ್ಶಕ ಅಥವಾ ಮುಕ್ತಿದಾತ ಬಂದು ಎಲ್ಲರನ್ನು ದುಃಖದಿಂದ ಬಿಡಿಸಿ ಕರೆದುಕೊಂಡು ಹೋಗುವವರೆಂದು ಮಹಿಮೆ ಮಾಡುತ್ತಾರೆ. ಪರಮಪಿತ ಪರಮಾತ್ಮ ಈಗ ಬ್ರಹ್ಮಾರವರಲ್ಲಿ ಪ್ರವೇಶ ಮಾಡಿದ್ದಾರೆ ಇವರು ಅತಿ ಶ್ರೇಷ್ಠ ವ್ಯಕ್ತಿ ಆಗಿದ್ದಾರೆ. ತಂದೆ ನಮ್ಮನ್ನು ಕರೆದುಕೊಂಡು ಹೋಗಲು ಬಂದಿದ್ದಾರೆಂಬ ಆತ್ಮಿಕ ನಶೆಯಲ್ಲಿ ನೀವು ಮಕ್ಕಳು ಇರಬೇಕು. ಅವರು ನನ್ನನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ಅವರನ್ನು ಅದೇ ಮಹತ್ವಿಕೆಯಿಂದ ಕೆಲವರು ಕಷ್ಟ ಪಟ್ಟು ನೋಡುತ್ತಾರೆ. ಭಗವಂತನಿಗೆ ಎಷ್ಟೊಂದು ಮಹಿಮೆಯಿದೆ. ಅವರೇ ಸರ್ವಶಕ್ತಿವಂತನಾಗಿದ್ದಾರೆ. ಭಗವಂತನಿಗೆ ಇರುವಷ್ಟು ಮಹಿಮೆ ಬೇರೆ ಯಾರಿಗೂ ಇಲ್ಲ. ಆದುದರಿಂದ ನೀವು ಮಕ್ಕಳು ತುಂಬಾ ಗೌರವನ್ನು ಇಡಬೇಕು. ಸಂಘಟನೆಯಲ್ಲಿ ಇರುವಾಗ ನಿಮಗೆ ತುಂಬಾ ನೆನಪಿರುತ್ತದೆ ನಂತರ ಅಲ್ಲಿ-ಇಲ್ಲಿ ಹೋದರೆ ನೆನಪಿನಲ್ಲಿರುವುದು ಕಷ್ಟವಾಗುತ್ತದೆ. ಮತ್ತೆ-ಮತ್ತೆ ದೇಹೀಅಭಿಮಾನಿ ಎಂದು ತಿಳಿದಾಗ ತಂದೆಯನ್ನು ನೆನಪು ಮಾಡಬಹುದು. ಇಂತಹ ತಂದೆ ಜೊತೆ ತುಂಬಾ ಗೌರವದಿಂದ ನಡೆಯಬೇಕು. ಆದರೆ

ತಂದೆಯು ಸಾಧಾರಣವಾಗಿರುವ ಕಾರಣ ಆ ಗೌರವ ಇರುವುದಿಲ್ಲ. ತಂದೆಯು ಕಾಲರ ಕಾಲನೆಂದು ತಿಳಿದುಕೊಂಡಿದ್ದಾರೆ. ಈ ಶಿವ ತಂದೆಗೆ ನೀವು ಬಾಪ್ದಾದಾ ಎಂದು ಹೇಳುತ್ತೀರಿ. ಅವರೇ ಎಲ್ಲರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವರು. ತಂದೆಗೆ ಸರ್ವ ಶ್ರೇಷ್ಠ ಪಾತ್ರ ದೊರೆತಿದೆ, ಅವರನ್ನು ಇಡೀ ಜಗತ್ತೇ ನೆನಪು ಮಾಡುತ್ತದೆ. ಆತ್ಮ ಎಂತಹ ವಸ್ತು ಆಗಿದೆ ಎಂದು ಬೇರೆ ಯಾರೂ ಹೇಳಲು ಸಾಧ್ಯವಿಲ್ಲ. ಲಿಂಗವೆಂದು ಹೇಳುತ್ತಾರೆ. ಶಿವಲಿಂಗವನ್ನು ಪೂಜಿಸುತ್ತಾರೆ ನಾವೂ ಸಹ ಜ್ಯೋತಿರ್ಲಿಂಗಂ ಎಂದು ಬರೆಯುತ್ತೇವೆ. ಆದರೆ ವಾಸ್ತವದಲ್ಲಿ ಅಷ್ಟೊಂದು ಬೃಹದಾಕಾರವೇನಲ್ಲ. ಅವರು ನಕ್ಷತ್ರದಂತೆ ಇದ್ದಾರೆ ಅವರಲ್ಲಿಯೇ ಇಡೀ ಪಾತ್ರ ತುಂಬಿದೆ. ಇದೂ ಸಹ ಯಾರ ಬುದ್ಧಿಯಲ್ಲು ಹೊಳೆಯುವುದಿಲ್ಲ. ಯಾವಾಗ ಆತ್ಮ ಹಾಗೂ ಪರಮಾತ್ಮ ನಕ್ಷತ್ರದಂತೆ ಇದ್ದಾರೆಂದು ತಿಳಿದುಕೊಳ್ಳುತ್ತಾರೆ ಆಗ ಈ ರೀತಿ ಆಶ್ಚರ್ಯ ಪಡುತ್ತಾರೆ. ಇಷ್ಟು ಶಕ್ತಿಯುಳ್ಳಂತಹ ತಂದೆ 84 ಜನ್ಮ ಪಡೆಯುವಂತಹವರಲ್ಲಿ ಪ್ರವೇಶ ಮಾಡಿ ನೀವು ಆತ್ಮರಾಗಿದ್ದೀರಿ ಎಂಬ ಜ್ಞಾನವನ್ನು ಕುಳಿತು ತಿಳಿಸುತ್ತಿದ್ದಾರೆ. ನಿಮ್ಮದೀಗ 84 ಜನ್ಮ ಪೂರ್ಣವಾಯಿತು. ಆದುದರಿಂದ ನನ್ನನ್ನು ನೆನಪು ಮಾಡಿ ಆಗ ವಿಕರ್ಮ ವಿನಾಶವಾಗುತ್ತದೆ.

ನಾನು ಆತ್ಮ ಎಷ್ಟೊಂದು ಸೂಕ್ಷ್ಮ ಬಿಂದು ಆಗಿದ್ದೇನೆಂದು ನಿಮಗೆ ತಿಳಿದಿರಬೇಕು. ಆತ್ಮನಲ್ಲಿ 84 ಜನ್ಮಗಳ ಪಾತ್ರ ತುಂಬಿದೆ, ಅದು ತನ್ನ ಸಮಯಕ್ಕೆ ಸರಿಯಾಗಿ ಪುನರಾವರ್ತನೆ ಮಾಡಲೇಬೇಕು. ಆದರೆ ಎಲ್ಲದಕ್ಕಿಂತಲು ಸರ್ವ ಶ್ರೇಷ್ಠ ಪಾತ್ರ ಶಿವ ತಂದೆಯದಾಗಿದೆ, ಹೇಗೆ ನಾಟಕದಲ್ಲಿ ರಾಜ-ರಾಣಿಯರ ಪಾತ್ರ ಶ್ರೇಷ್ಠವಾಗಿರುತ್ತದೆ ಅದೇ ರೀತಿ ಶಿವ ತಂದೆಯ ಪಾತ್ರ ಈ ನಾಟಕದಲ್ಲಿ ಸರ್ವ ಶ್ರೇಷ್ಠವಾಗಿದೆ. ಇದು ಮಾಡಿ ಮಾಡಲ್ಪಟ್ಟ ನಾಟಕ ಪುನಃ ಪುನರಾವರ್ತನೆ ಆಗುತ್ತಿರುತ್ತದೆ ಹಾಗೂ ಈ ನಾಟಕದಲ್ಲಿ ಶ್ರೇಷ್ಠಾತಿ ಶ್ರೇಷ್ಠ ತಂದೆಗೆ ಸರ್ವಶ್ರೇಷ್ಠ ಪಾತ್ರವಿದೆ ಎಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ನಿಮಗೂ ಸಹ ಇಡೀ ಬೇಹದ್ದಿನ ನಾಟಕ ಬುದ್ಧಿಯಲ್ಲಿದೆ. ತಂದೆ ಪರಮಪಿತ ಪರಮಾತ್ಮ ಈ ಸಾಧಾರಣ ಶರೀರದಲ್ಲಿ ಹೇಗೆ ಪ್ರವೇಶ ಮಾಡುವರು. ಇದನ್ನು ಶಾಸ್ತ್ರಗಳಲ್ಲಿ ಅರ್ಜುನನ ಕುದುರೆ ಗಾಡಿಯನ್ನಾಗಿ ತೋರಿಸಿದ್ದಾರೆ - ರಥವೆಂದರೆ ತುಂಬಾ ದೊಡ್ಡದಾಗಿರುತ್ತದೆ. ಇವರ ಶರೀರವೇ ತಂದೆಯ ರಥ. ಸ್ವಯಂ ಪರಮಪಿತ ಪರಮಾತ್ಮ ತಿಳಿಸುತ್ತಿದ್ದಾರೆ - ನಾನು ಇವರಲ್ಲಿ ಪ್ರವೇಶ ಮಾಡಿ ಎಲ್ಲಾ ಮಾತುಗಳನ್ನು ತಿಳಿಸಿಕೊಡುತ್ತೇನೆ. ಇದು ಸಂಪೂರ್ಣವಾಗಿ ಹೊಸ ಮಾತಾಗಿರುವ ಕಾರಣ ಯಾರ ಬುದ್ಧಿಯಲ್ಲಿಯೂ ಕುಳಿತುಕೊಳ್ಳುವುದಿಲ್ಲ. ಮಕ್ಕಳೇ ಆತ್ಮಾಭಿಮಾನಿಯಾಗಿ ಎಂದು ತಂದೆಯು ತಿಳಿಸುತ್ತಿದ್ದಾರೆ. ನಿಮಗೀಗ ಪರಮಪಿತ ಪರಮಾತ್ಮ ಓದಿಸುತ್ತಿದ್ದಾರೆ, ಅವರನ್ನೇ ನೆನಪು ಮಾಡಬೇಕು, ಅವರು ಈ ಶರೀರದಲ್ಲಿ ಕುಳಿತುಕೊಂಡಿದ್ದಾರೆ. ಇವರಿಗೆ ನೀವು ದಾದಾ ಎಂದು ಹೇಳುತ್ತೀರಿ. ಬಾಪ್ದಾದಾ ಇಬ್ಬರೂ ಕಂಬೈಂಡ್ ಆಗಿದ್ದಾರೆ. ಈಗ ನೀವು ಬಾಪ್ದಾದಾ ಎಂದು ಕರೆಯುತ್ತೀರಲ್ಲವೇ. ಮೊದಲು ತಂದೆ, ನಂತರ ದಾದಾ. ಇವರು ನಿಮ್ಮ ತಾಯಿಯೂ ಸಹ ಆಗಿದ್ದಾರೆ. ಈ ರೀತಿ ನಿಮಗೆ ರಹಸ್ಯ ಮಾತುಗಳನ್ನು ತಿಳಿಸುತ್ತಾರೆ. ಇವರು ಬ್ರಹ್ಮಾ ಪುತ್ರ ನದಿ ಆಗಿದ್ದಾರೆ. ಇವರು ಸಾಗರನಲ್ಲ. ಇವರಿಗೆ ಅತ್ಯಂತ ದೊಡ್ಡ ನದಿ ಎಂದು ಹೇಳಲಾಗುವುದು. ನಂತರ ಇವರು ಸರಸ್ವತಿ, ನೀವು ಜ್ಞಾನ ಸಾಗರನಿಂದ ಬಂದಂತಹ ಜ್ಞಾನ ಗಂಗೆಯರು. ಅವರು ಇದನ್ನು ಚಿತ್ರದ ರೂಪದಲ್ಲಿ ಮಾಡಿದ್ದಾರೆ. ಬ್ರಹ್ಮಾ ತಂದೆ ಎಲ್ಲಿಂದ ಬರುತ್ತಾರೆ ಎಂದು ಅವರಿಗೆ ಗೊತ್ತಿಲ್ಲ. ಸಿಂಧು ಸರಸ್ವತಿ ಎಂಬ ಹೆಸರಿದೆ. ಅಲ್ಪ-ಸ್ವಲ್ಪ ಶಾಸ್ತ್ರಗಳಲ್ಲಿಯೂ ಬರೆದಿದ್ದಾರೆ. ಆತ್ಮವೇ ಪತಿತ ಆತ್ಮವೇ ಪಾವನ ಆಗುತ್ತದೆ. ಬಾಕಿ ಪತಿತ ಪಾವನವೆಂದು ಶರೀರಕ್ಕೆ ಹೇಳುವುದಿಲ್ಲ, ಆತ್ಮನಿಗೆ ಮಾತ್ರ ಹೇಳಲಾಗುವುದು. ಈ ಸಮಯದಲ್ಲಿ ಬಹುಷಃ ಎಲ್ಲರೂ ಪತಿತರಾಗಿದ್ದಾರೆ. ಯಾರ ಶರೀರವೂ ಪವಿತ್ರವಾಗಿಲ್ಲ. ಎಲ್ಲರೂ ಪಾಪಾತ್ಮಗಳಾಗಿದ್ದಾರೆ. ನೀವು ಎಲ್ಲರಿಗಿಂತ ಪುಣ್ಯಾತ್ಮರಾಗುತ್ತೀರಿ. ಸರ್ವಸ್ವವನ್ನು ಶಿವ ತಂದೆಗೆ ಸಮರ್ಪಣೆ ಮಾಡುತ್ತೀರಿ. ಒಂದೊಂದು ವಸ್ತುವನ್ನು ಸಮರ್ಪಣೆ ಮಾಡುವಂತಹವರು ಬಹಳ ಜನ ಇರುತ್ತಾರೆ. ಲೋಭವನ್ನು ಸಮರ್ಪಣೆ ಮಾಡುವುದು ಎಂದರೆ ಯಾವುದಾದರೂ ವಸ್ತುವನ್ನು ತ್ಯಾಗ ಮಾಡುತ್ತಾರೆ. ಈಗ ನೀವು ತಂದೆಯ ಮಕ್ಕಳಾಗಿರುವ ಕಾರಣ ಎಲ್ಲವನ್ನು ತಂದೆಗೆ ಸಮರ್ಪಣೆ ಮಾಡುತ್ತೀರಿ. ತಂದೆ ಸಮರ್ಪಣೆಗೆ ಬದಲಾಗಿ ಆಸ್ತಿ ಕೊಡುತ್ತಾರೆ. ಯಾರು ಎಷ್ಟು ಶ್ರೀಮತದಂತೆ ನಡೆಯುತ್ತಾ ಸಮರ್ಪಣೆ ಮಾಡುವವರಿಗೆ ಉತ್ತಮ ಪದವಿ ಸಿಗುತ್ತದೆ. ಶಿವ ತಂದೆಯನ್ನು ನೆನಪು ಮಾಡುವುದು ಮುಖ್ಯವಾಗಿದೆ. ಶಿವ ತಂದೆಯು ಇಲ್ಲಿಗೆ ಓದಿಸಲು ಬರುತ್ತಾರೆ. ಇಡೀ ದಿನ ಇವರ ಶರೀರದಲ್ಲಿಯೇ ಕುಳಿತುಕೊಳ್ಳುವುದಿಲ್ಲ. ಇದು ಸೆಕೆಂಡಿನ ಮಾತಾಗಿದೆ, ನೀವು ನೆನಪು ಮಾಡಿದರೆ ಸಾಕು ಅವರು ಬಂದು ಬಿಡುತ್ತಾರೆ. ತಂದೆಯು ಸದಾ ಇಲ್ಲಿಯೇ ಇರುವರೆಂದು ನಿಮಗೆ ತಿಳಿದಿರಬಹುದು. ಆದರೆ ಸ್ವಯಂ ಇವರೇ (ಬ್ರಹ್ಮಾ) ಮರೆತು ಹೋಗುತ್ತಾರೆ. ಈ ಸಮಯದಲ್ಲಿ ತಂದೆ ತಿಳಿಸುತ್ತಾರೆ - ನಾನು ಎಲ್ಲರನ್ನು ಕರೆದೊಯ್ಯಲು ಬಂದಿದ್ದೇನೆ. ವಿನಾಶವೂ ಅಗತ್ಯವಾಗಿ ಆಗಲೇಬೇಕೆಂದು ವಿವೇಕ ಹೇಳುತ್ತದೆ. ಈಗ ತುಂಬಾ ಮನುಷ್ಯರಾಗಿ ಬಿಟ್ಟಿದ್ದಾರೆ. ವಿನಾಶಕ್ಕಾಗಿ ತುಂಬಾ ತಯಾರಿಗಳಾಗುತ್ತಿದೆ. ಉಳಿದೆಲ್ಲರೂ ಸಹ ವಿನಾಶವಾಗುತ್ತಾರೆ ಎಂದು ಹೇಳುತ್ತಾರೆ, ಆದರೆ ವಿನಾಶದ ನಂತರ ಏನಾಗುತ್ತದೆ ಎನ್ನುವುದನ್ನು ತಿಳಿದುಕೊಂಡಿಲ್ಲ. ತಂದೆ ಬಂದಿದ್ದಾರೆ, ರಾಜಧಾನಿ ಸ್ಥಾಪನೆಯಾಗುತ್ತಿದೆ ಎಂದು ನಿಮ್ಮಲ್ಲಿಯೂ ನಂಬರ್ವಾರ್ ತಿಳಿದುಕೊಂಡಿದ್ದೀರಿ. ನಾವೂ ಸಹ ತಂದೆ ಜೊತೆ ಸೇವೆಯಲ್ಲಿ ಸಹಯೋಗಿಗಳಾಗಿ ಮುಳ್ಳುಗಳನ್ನು ಹೂಗಳನ್ನಾಗಿ ಮಾಡುತ್ತಿದ್ದೇವೆ. ಭಕ್ತಿ ಮಾರ್ಗದವರು ತಂದೆಯನ್ನು ತಿಳಿದುಕೊಂಡಿಲ್ಲ. ಒಂದುವೇಳೆ ಶಾಸ್ತ್ರಗಳನ್ನು ಓದುವದರಿಂದ ಪರಮಾತ್ಮನನ್ನು ಮಿಲನ ಮಾಡುವದಾರಿ ಸಿಗುವುದಾದರೆ ಇದುವರೆಗು ಯಾರಾದರೂ ತಲುಪಬೇಕಾಗಿತ್ತು. ಆದರೆ ತಂದೆ ತಿಳಿಸುತ್ತಾರೆ ಯಾರು ಇದುವರೆಗೂ ಪರಂಧಾಮಕ್ಕೆ ಹಿಂತಿರುಗಿ ಹೋಗಿಲ್ಲ. ಹೊಸ ಪ್ರಪಂಚದಲ್ಲಿ ಹೊಸ ಕುಲ ಆರಂಭವಾಗುವುದೆಂದು ಕೆಲವರು ತಿಳಿದುಕೊಂಡಿದ್ದಾರೆ. ಈ ಪ್ರಪಂಚದಲ್ಲಿ ಅನೇಕ ಮತಮತಾಂತರಗಳಿವೆ. ತಂದೆಯು ಇದೆಲ್ಲಾ ಅಸತ್ಯವೆಂದು ತಿಳಿಸುತ್ತಿದ್ದಾರೆ. ಸತ್ಯ ಹೇಳುವಂತಹವರು ತಂದೆ ಒಬ್ಬರೇ ಆಗಿದ್ದಾರೆ. ಸತ್-ಶ್ರೀ ಅಕಾಲ್-ಮೂರ್ತ್ ಎಂದು

ಹೇಳುವರು. ಆತ್ಮಗಳೆಲ್ಲರೂ ಅಕಾಲ್-ಮೂರ್ತ್ ಆಗಿದ್ದಾರೆ. ಆದುದರಿಂದ ಸತ್ಯ ಶ್ರೀ ಅಕಾಲ ಒಬ್ಬರೇ, ಉಳಿದಿದ್ದೆಲ್ಲವೂ ಅಸತ್ಯ ಅರ್ಥಾತ್ ಅಸತ್ಯ ಆಗಿದೆ. "ಸತ್ಯ" ಎಂದು ಜ್ಞಾನದ ಮಾತುಗಳಿಗೆ ಹೇಳಲಾಗುವುದು. ಪ್ರಪಂಚದವರು ಈಶ್ವರನಿಗಾಗಿ ಹೇಳುವ ಜ್ಞಾನ ಅಸತ್ಯವಾಗಿದೆ. ಈಶ್ವರೀಯ ಜ್ಞಾನವನ್ನು ಒಬ್ಬ ಪರಮಾತ್ಮನೇ ಬಂದು ನೀಡುವರು. ಈಗ ನಾಟಕ ಮುಗಿದು ಮನೆಗೆ ಹಿಂತಿರುಗಬೇಕೆಂಬ ನೆನಪಿರಬೇಕು. ಹೇಗೆ ಆ ನಾಟಕವು ಅಂತ್ಯವಾಗುತ್ತಾ ಹೋದಂತೆ ಈ ನಾಟಕವನ್ನು ಮುಗಿಸಿಕೊಂಡು ನಮ್ಮ ಮನೆಗೆ ನಾವು ಹಿಂತಿರುಗುತ್ತೇವೆಂದು ಪಾತ್ರಧಾರಿಗಳಿಗೆ ತಿಳಿದಿರುತ್ತದೆ. ನಾವೆಲ್ಲರೂ ಪಾತ್ರಧಾರಿಗಳಾಗಿರುವ ಕಾರಣ, ಬಾಕಿ ಇನ್ನು ಸ್ವಲ್ಪವೇ ಸಮಯ ಉಳಿದಿದೆ ಎಂಬ ಜ್ಞಾನವೂ ನಮಗೆ ಇರಬೇಕು. ನಾವೆಲ್ಲಾ ಆತ್ಮಗಳನ್ನು ಕರೆದೊಯ್ಯಲು ತಂದೆ ಬಂದಿದ್ದಾರೆ ಆದರೆ ಯಾವಾಗ ಕರೆದೊಯ್ಯುವರೆಂದು ತಿಳಿಸುವುದಿಲ್ಲ. ಇದು ನಾಟಕವಾಗಿದೆ. ಇದ್ದಕ್ಕಿದ್ದಂತೆ ತಾನಾಗಿಯೇ ಎಲ್ಲವೂ ನಡೆಯುತ್ತಿರುತ್ತದೆ. ಸಾಧ್ಯವಾದಷ್ಟು ಇದನ್ನು ಎಲ್ಲರಿಗೂ ತಿಳಿಸಿಕೊಡಬೇಕು. ಅವರು ಇದು ಸತ್ಯವೆಂದು ತಿಳಿಯಲಾರರು ಆದರೆ ಹೇಳುವವರು ತಿಳಿದಿರುವ ಕಾರಣ ಅವರಿಗೆ ತಿಳಿಸಬೇಕು. ನೀವು ಮಕ್ಕಳು ಹೀಗೆ ತಿಳಿಸಿಕೊಡಬೇಕು - ಲೌಕಿಕ ತಂದೆಯಿಂದ ಜನ್ಮ-ಜನ್ಮಾಂತರ ಆಸ್ತಿ ಪಡೆಯುತ್ತಾ ಬಂದಿದ್ದೀರಿ, ಈಗ ಬೇಹದ್ದಿನ ಪಾರಲೌಕಿಕ ತಂದೆಯಿಂದ ಆಸ್ತಿಯನ್ನು ಪಡೆದುಕೊಳ್ಳಿ. ಕಲ್ಪದ ಹಿಂದೆ ಯಾರು ತಿಳಿದುಕೊಂಡಿದ್ದರು ಅವರಿಗೆ ಮಾತ್ರ ಈ ಮಾತಿನ ಪ್ರಭಾವ ಬೀರುತ್ತದೆ. ನೀವು ಮಕ್ಕಳು ಮತ್ತೆ-ಮತ್ತೆ ನೆನಪು ಮಾಡಬೇಕು. ಏಕೆಂದರೆ ಈಗ ನೀವು ಶಾಂತಿಧಾಮಕ್ಕೆ ಹೋಗಬೇಕಾಗಿದೆ. ಸರ್ಕಾರಿ ನೌಕರರು 8 ಗಂಟೆಗಳ ಸೇವೆ ಮಾಡುತ್ತಾರೆ, ನೀವು ಸಹ 8 ಗಂಟೆ ಕಾಲ ನೆನಪಿನ ಯಾತ್ರೆಯನ್ನು ಹೆಚ್ಚಿಸಿಕೊಳ್ಳಬೇಕು. ಅಂತ್ಯವೇಳೆಗೆ ನೀವು 8 ಗಂಟೆಗಳು ಕಾಲ ಸೇವೆ ಮಾಡಿದಾಗ ನೀವು ಪೂರ್ಣ ಆಸ್ತಿ ಪಡೆದುಕೊಳ್ಳುವಿರಿ. ಎಲ್ಲರೂ ತೆಗೆದುಕೊಳ್ಳಲು ಸಾಧ್ಯವಿಲ್ಲ. ಒಂದುವೇಳೆ ಕೆಲವರು ತೀವ್ರ ಗತಿಯಿಂದ ಪುರುಷಾರ್ಥ ಮಾಡುವರು, ಆದರೆ ನಂತರ ಸುಸ್ತಾಗಿ ಬಿಡುತ್ತಾರೆ. ಏಕೆಂದರೆ ಇದು ಸರ್ವ ಶ್ರೇಷ್ಠ ಗುರಿಯಾಗಿದೆ.

ತಂದೆ ಎಲ್ಲಾ ಆತ್ಮಗಳನ್ನು ಕರೆದುಕೊಂಡು ಹೋಗವರೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಒಮ್ಮೊಮ್ಮೆ ಈ ಬ್ರಹ್ಮಾ ತಂದೆಗೂ ಸಹ ಈಗ ಎಲ್ಲರನ್ನೂ ಹಿಂತಿರುಗಿ ಕರೆದುಕೊಂಡು ಹೋಗಬೇಕೆಂಬ ಯೋಚನೆ ಬರುತ್ತದೆ. ತಂದೆಯ ಸಂಸ್ಕಾರ ಇವರಲ್ಲಿ ತುಂಬಿರುತ್ತದೆ. ಇವರೂ ಸಹ ಪುರುಷಾರ್ಥಿಯಾಗಿದ್ದಾರೆ, ಈಗ ನಾಟಕ ಪೂರ್ತಿಯಾಗುತ್ತಿದೆ, ಆದುದರಿಂದ ಎಲ್ಲರೂ ಹಿಂತಿರುಗಬೇಕಾಗಿದೆ. ಒಂದುವೇಳೆ ಇದನ್ನಷ್ಟೆ ಯಾರಾದರೂ ನೆನಪು ಮಾಡಿದರೆ ಇದನ್ನು ಮನ್ಮನಾಭವ ಎಂದು ಕರೆಯಲಾಗುವುದು.

ಈಗ ನೀವು ಮಕ್ಕಳು ಸಮ್ಮುಖದಲ್ಲಿ ಕುಳಿತಿದ್ದೀರಿ. ಸಮ್ಮುಖದಲ್ಲಿ ಕೇಳುವುದರಿಂದ ಮುದ್ರೆಯಂತೆ ಮನಸ್ಸಿನಲ್ಲಿ ಉಳಿದು ಬಿಡುತ್ತದೆ. ಈಗ ಮನೆಗೆ ಹಿಂತಿರುಗಬೇಕೆಂದು ಮತ್ತೆ-ಮತ್ತೆ ನೆನಪು ಮಾಡುತ್ತೀರಿ. ನಿಮಗೀಗ ಸಾಯಲು ಭಯವಿಲ್ಲ. ಮೃತ್ಯುವಿಗಾಗಿ ಎಂದಿಗೂ ಭಯ ಪಡಬಾರದು, ದೇಹೀ-ಅಭಿಮಾನಿಯಾಗಬೇಕು. ದೇಹೀ-ಅಭಿಮಾನಿಗಳು ಉತ್ತಮ ಸೇವೆಯನ್ನು ಮಾಡಬಲ್ಲಿರಿ. ಅದಕ್ಕಾಗಿ ಜ್ಞಾನಿ ಆತ್ಮರಾಗಬೇಕು. ಪ್ರದರ್ಶನದಲ್ಲಿ ಧ್ಯಾನದಲ್ಲಿ ಹೋಗುವವರಿಗಿಂತ ಜ್ಞಾನಿಗಳು ಬೇಕಾಗುತ್ತದೆ. ಜ್ಞಾನಿ ಆತ್ಮನೇ ಪ್ರಿಯ ಆಗಿರುತ್ತಾರೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಹೊಸ ರಾಜಧಾನಿ ಮಾಡುವ ಸಲುವಾಗಿ ತಂದೆಯ ಸೇವೆಯಲ್ಲಿ ಸಹಯೋಗಿ ಆಗಬೇಕು. ಮುಳ್ಳುಗಳನ್ನು ಹೂಗಳನ್ನಾಗಿ ಮಾಡುವ ಸೇವೆಯನ್ನು ಮಾಡಬೇಕು.

2. ಕಡಿಮೆ ಅಂದರೆ 8 ಗಂಟೆಗಳ ಕಾಲ ನೆನಪಿನ ಯಾತ್ರೆಯಲ್ಲಿ ಇರುವ ಅಭ್ಯಾಸ ಮಾಡಬೇಕು. ಮೃತ್ಯುವಿಗೆ ಭಯ ಪಡಬಾರದು, ಏಕೆಂದರೆ "ಈಗ ಮನೆಗೆ ಹೋಗಬೇಕು" ಎಂದು ಬುದ್ಧಿಯಲ್ಲಿದೆ.

ವರದಾನ: ಸ್ವಯಂನ್ನು ವಿಶೇಷ ಪಾತ್ರಧಾರಿ ಎಂದು ತಿಳಿದು ಸಾಧಾರಣತೆಯನ್ನು ಸಮಾಪ್ತಿ ಮಾಡುವಂತಹ ಪರಮ ಅಥವಾ ಶ್ರೇಷ್ಠ ಭವ.

ಯಾವ ರೀತಿ ತಂದೆಯು ಪರಮ ಆತ್ಮನಾಗಿದ್ದಾರೆಯೋ ಹಾಗೆಯೇ ವಿಶೇಷ ಪಾತ್ರವನ್ನು ಅಭಿನಯಿಸುವ ಮಕ್ಕಳೂ ಸಹ, ಪ್ರತಿಯೊಂದು ಮಾತಿನಲ್ಲಿಯೂ ಪರಮ ಅಂದರೆ ಶ್ರೇಷ್ಠವಾಗಿದ್ದಾರೆ. ಅದಕ್ಕಾಗಿ ಕೇವಲ ನಡೆಯುತ್ತಾ-ಸುತ್ತಾಡುತ್ತಾ, ತಿನ್ನುತ್ತಾ-ಕುಡಿಯುತ್ತಾ ವಿಶೇಷ ಪಾತ್ರಧಾರಿ ಎಂದು ತಿಳಿದುಕೊಂಡು, ಡ್ರಾಮಾದ ಸ್ಟೇಜಿನ ಮೇಲೆ ಪಾತ್ರವನ್ನು ಅಭಿನಯಿಸಿರಿ. ಪ್ರತೀ ಸಮಯದಲ್ಲಿ ತಮ್ಮ ಕರ್ಮ ಅರ್ಥಾತ್ ಪಾತ್ರದಲ್ಲಿ ಗಮನವಿರಲಿ. ವಿಶೇಷ ಪಾತ್ರಧಾರಿಗಳೆಂದಿಗೂ ಹುಡುಗಾಟಿಕೆಯಿಂದ ಇರಲು ಸಾಧ್ಯವಿಲ್ಲ. ಒಂದುವೇಳೆ ಹೀರೋ ಪಾತ್ರಧಾರಿಯು ಸಾಧಾರಣ ಪಾತ್ರ ಮಾಡಿದರೆ ಎಲ್ಲರೂ ನಗುವರು. ಆದ್ದರಿಂದ ಪ್ರತೀ ಹೆಜ್ಜೆ, ಪ್ರತೀ ಸಂಕಲ್ಪ,

ಪ್ರತೀ ಸಮಯದಲ್ಲಿ ವಿಶೇಷವಾಗಿರಿ, ಸಾಧಾರಣರಲ್ಲ.

ಸ್ಲೋಗನ್: ತಮ್ಮ ವೃತ್ತಿಯನ್ನು ಶಕ್ತಿಶಾಲಿಗೊಳಿಸುತ್ತೀರೆಂದರೆ ಸೇವೆಯಲ್ಲಿ ವೃದ್ಧಿಯು ತಾನಾಗಿಯೇ ಆಗುವುದು.

ಮಾತೇಶ್ವರಿಯವರ ಅಮೂಲ್ಯ ಮಹಾವಾಕ್ಯ - ''ನಿರಂತರ ನೆನಪು ಅರ್ಥಾತ್ ನಿರಂತರ ನೆನಪಿನಲ್ಲಿರುವುದು''

ಪರಮಾತ್ಮನ ಆದೇಶವಿದೆ - ನಿರಂತರ ನನ್ನನ್ನು ನೆನಪು ಮಾಡಿರಿ, ಈಗ ನಿರಂತರ ಶಬ್ಧದ ರಹಸ್ಯವನ್ನು ತಿಳಿದುಕೊಳ್ಳಬೇಕಾಗುತ್ತದೆ. ನಿರಂತರ ಎಂದರೆ ಯಾವುದರಲ್ಲಿ ಅಂತರವೇ ಇಲ್ಲ, ನಿರಂತರ ಯೋಗವಿರುತ್ತದೆ. ಯಾವುದರಲ್ಲಿ ಖಂಡನೆಯಾಗುವುದಿಲ್ಲ, ಅದನ್ನು ಅಟೂಟ ಯೋಗವೆಂದು ಹೇಳಲಾಗುತ್ತದೆ. ಪರಮಾತ್ಮನು ಈಗ ಪ್ರತಿಜ್ಞೆ ಮಾಡುತ್ತಾರೆ - ನೀವೇನಾದರೂ ನನ್ನನ್ನು ನಿರಂತರ ನೆನಪು ಮಾಡುತ್ತೀರೆಂದರೆ, ನಾನು ನಿಮಗಾಗಿ ಹಿಂದಿನ ವಿಕರ್ಮಗಳನ್ನು ಭಸ್ಮಗೊಳಿಸುವೆನು. ಅಂದಮೇಲೆ ಈ ಜ್ಞಾನಾಗ್ನಿಯಲ್ಲಿ ವಿಕರ್ಮಗಳು ಭಸ್ಮವಾಗುತ್ತವೆ. ಈ ತಂದೆಯು ಧರ್ಮರಾಜನೂ ಆಗಿದ್ದಾರೆ, ಅವರು ಯಾವಾಗ ಶಿಕ್ಷೆಗಳಿಂದ ವಿಕರ್ಮಗಳ ವಿನಾಶ ಮಾಡಿಸಬಹುದು ಅಂದಮೇಲೆ ತಂದೆಯ ಬಳಿ ಪ್ರೀತಿಯ ವಿಧಿಯೂ ಸಹ ಏನಾದರೂ ಇರಬಹುದು. ಹಾಗಾದರೆ ಯಾರು ಪ್ರತ್ಯಕ್ಷದಲ್ಲಿ ಅವರ ಮಕ್ಕಳಾಗಿದ್ದಾರೆಯೋ ಅವರಿಗೆ ಈ ಆದೇಶವನ್ನು ಕೊಡುತ್ತಾರೆ - ಹೇ ಮಕ್ಕಳೇ, ಮನ್ಮನಾಭವ, ನೀವು ನನ್ನನ್ನು ನಿರಂತರ ನೆನಪು ಮಾಡುವುದರಿಂದ ವಿಕರ್ಮಾಜೀತರಾಗುವಿರಿ, ಧರ್ಮರಾಜನ ಶಿಕ್ಷೆಗಳಿಂದ ಪಾರಾಗುವಿರಿ. ಪರಮಾತ್ಮನ ಬಳಿ ವಿಕರ್ಮ ವಿನಾಶ ಮಾಡಿಸುವ ಎರಡು ವಿಧಿಗಳಿವೆ - 1. ಶಿಕ್ಷೆಗಳಿಂದ ಪವಿತ್ರರನ್ನಾಗಿ ಮಾಡುವ ವಿಧಿ, 2. ಯೋಗವನ್ನು ಇಡುವುದರಿಂದ ಪವಿತ್ರರಾಗುವ ವಿಧಿ, ಇದರಿಂದ ಪಾಪಗಳು ನಾಶವಾಗುತ್ತವೆ ಹಾಗೂ ಜೀವನ್ಮುಕ್ತಿಯ ಪದವಿಯು ಪ್ರಾಪ್ತಿಯಾಗುತ್ತದೆ. ದುಃಖಗಳಲ್ಲಿ ಬಂದು ಹೋಗುವುದರಿಂದ ಮುಕ್ತರಾಗಲು ಪರಮಾತ್ಮನ ನೆನಪಲ್ಲದೆ ಮತ್ತ್ಯಾವುದೇ ಉಪಾಯವಿಲ್ಲ. ಒಳ್ಳೆಯದು. ಓಂ ಶಾಂತಿ.